# ICSE 2023 EXAMINATION

## SPECIMEN QUESTION PAPER

## KANNADA

## (SECOND LANGUAGE)

---

*Maximum Marks: 80*

*Time allowed: Three hours*

*Answers to this Paper must be written on the paper provided separately.*

*You will not be allowed to write during the first 15 minutes.*

*This time is to be spent in reading the question paper.*

*The time given at the head of this Paper is the time allowed for writing the answers.*

---

***Section A** is compulsory – **All** questions in **Section A** must be answered.*

*Attempt **any four** questions from **Sections B**, answering at least **one** question each from the two books you have studied and **any two** questions from the same books you have studied.*

*The intended marks for questions or parts of questions are given in brackets [ ].*

---

### SECTION A

*(Attempt **all** questions.)*

**Question 1**

Write a short composition in **Kannada** of approximately **250** words on **any one** of the following topics: [15]

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು 250 ಪದಗಳ ಸಂಕ್ಷಿಪ್ತ ಪ್ರಬಂಧ ಬರೆಯಿರಿ:

(i) ನೀವು ಮೊದಲ ಬಾರಿಗೆ ಸ್ವೀಕರಿಸಿದ ಉಡುಗೊರೆ ಯಾವುದು? ಯಾವಾಗ? ನಿಮಗಾದ ಅನುಭವವನ್ನು ತಿಳಿಸಿ ಒಂದು ಪ್ರಬಂಧ ಬರೆಯಿರಿ.

(ii) ಮಾಡಿದ್ದು ಚಿಕ್ಕ ತಪ್ಪಾದರೂ ಅನುಭವಿಸಿದ ವೇದನೆ ಹಿರಿದು ಈ ಹೇಳಿಕೆಯ ಆಧಾರದ ಮೇಲೆ ನೀವು ಮಾಡಿದ (ಚಿಕ್ಕ) ಅಪರಾಧ ಯಾವುದು – ಅದರಿಂದ ನೀವು ಅನುಭವಿಸಿದ ಮಾನಸಿಕ ಪರಿತಾಪವೆಷ್ಟು. ಇದರಿಂದ ನೀವು ಕಲಿತ ಪಾಠವೇನು ವರ್ಣಿಸಿ.

(iii) ಎಲ್ಲೆಲ್ಲಿ ನೋಡಿದರೂ ಜಾಹೀರಾತು – ಜಾಹೀರಾತುಗಳದೇ ದರ್ಬಾರು. ಇಂದಿನ ಆಧುನಿಕ ಯುಗದಲ್ಲಿ ಜಾಹೀರಾತುಗಳಿಂದ ಆಗುವ ಲಾಭ–ನಷ್ಟವನ್ನು ನಿಮಗೆ ತಿಳಿದ ಒಂದೆರಡು ಜಾಹೀರಾತುಗಳನ್ನು ತಿಳಿಸುತ್ತಾ ನಿಮ್ಮ ಅನುಭವವನ್ನು ಬರೆಯಿರಿ.

(iv) ಇಂದು ಮೊಬೈಲ್ ಸಾಧನ ಮಾನವನ ಅವಿಭಾಜ್ಯ ಅಂಗವಾಗಿದೆ. ಈ ಹಿನ್ನಲೆಯಲ್ಲಿ ಮೊಬೈಲ್‌ನಿಂದ ಉಂಟಾಗುವ ಅನುಕೂಲ ಮತ್ತು ಅನಾನುಕೂಲಗಳನ್ನು ಕುರಿತು ಬರೆಯಿರಿ.

(v) ಕೆಳಗೆ ಕೊಟ್ಟಿರುವ ಚಿತ್ರವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ, ಈ ಚಿತ್ರವನ್ನು ಆಧರಿಸಿ ಒಂದು ಕಥೆ ಅಥವಾ ಒಂದು ಪ್ರಬಂಧ ಬರೆಯಿರಿ. ಚಿತ್ರಕ್ಕೂ ನಿಮ್ಮ ವರ್ಣನೆಗೂ ಸ್ಪಷ್ಟವಾಗಿ ಸಂಬಂಧವಿರಬೇಕು.



**Question 2**

Write a letter in **Kannada** in approximately **120** words on **any one** of the topics given below: [7]

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು 120 ಪದಗಳಲ್ಲಿ ಒಂದು ಪತ್ರವನ್ನು ಬರೆಯಿರಿ:

(i) ಇತ್ತೀಚಿನ ದಿನಗಳಲ್ಲಿ ಬೆಲೆ ಏರಿಕೆಯು ಒಂದು ಸಮಸ್ಯೆಯಾಗಿದೆ. ಇದನ್ನು ತಗ್ಗಿಸಲು ಕೆಲವು ಪರಿಹಾರೋಪಾಯಗಳನ್ನು ಸೂಚಿಸಿ ರಾಜ್ಯದ ಮುಖ್ಯಮಂತ್ರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ.

(ii) ನೀವು ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ಕಾರಣಕ್ಕಾಗಿ ನಿಮ್ಮ ತಂದೆ, ತಾಯಿಯೊಂದಿಗೆ ಹೋಟೇಲಿಗೆ ಹೋಗಿ ಅನುಭವಿಸಿದ ಸಂಭ್ರಮವನ್ನು ವಿವರಿಸಿ ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

**Question 3**

Read the passage given below and answer in **Kannada** the questions that follow using your own words as for as possible:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

"ಕೈಬೆರಳಚ್ಚುಗಳು (ಫಿಂಗರ್ ಪ್ರಿಂಟ್ಸ್) ಒಬ್ಬ ವ್ಯಕ್ತಿಯ ಏಕಮೇವ ಮತ್ತು ವೈಶಿಷ್ಟ್ಯಪೂರ್ಣವಾದ ಪರಿಚಯಪತ್ರಗಳೆನ್ನಬಹುದು. ಯಾವುದೇ ಎರಡು ಕೈಬೆರಳಚ್ಚುಗಳು ಒಂದೇ ರೀತಿಯಾಗಿರುವುದಿಲ್ಲ." ಪ್ರತಿ ಕೈಬೆರಳಚ್ಚಿಗೂ ತನ್ನದೇ ಆದ ಉಬ್ಬುತಗ್ಗು ಗೆರೆಯ ವೈಶಿಷ್ಟ್ಯವಿದೆ. ಅವಳಿ-ಜವಳಿ ಮಕ್ಕಳು ನೋಡಲು ಒಂದೇಯಾಗಿದ್ದರೂ ಅವರ ಕೈಬೆರಳಚ್ಚುಗಳು ಬೇರೆಬೇರೆಯಾಗಿರುತ್ತವೆ. ಕೆಲವು ವಿಜ್ಞಾನಿಗಳ ಪ್ರಕಾರ 6,400 ಕೋಟಿ ಜನರಲ್ಲಿ ಒಬ್ಬನ ಕೈಬೆರಳಚ್ಚು ಇನ್ನೊಬ್ಬನ ಕೈಬೆರಳಚ್ಚಿಗೆ ಸರಿಹೊಂದಬಹುದೆಂದು ಅಂದಾಜು ಇದೆ. ಅದೇನೇ ಇರಲಿ, ಇದುವರೆಗೂ ಈ ಜಗತ್ತಿನಲ್ಲಿ ಯಾವುದೇ ಒಬ್ಬನ ಕೈಬೆರಳಚ್ಚು ಇನ್ನೊಬ್ಬನಂತೆ ಇದ್ದುದ್ದು ಕಂಡುಬಂದಿಲ್ಲ.

ಕೈಬೆರಳಚ್ಚಿನ ಎರಡನೇ ಮೂಲತತ್ವವೆಂದರೆ ಅದು ಯಾವ ಬದಲಾವಣೆ ಹೊಂದದೇ ಆಜನ್ಮ ಒಂದೇ ರೀತಿಯಾಗಿ ಉಳಿಯುತ್ತದೆ. ಗರ್ಭದಲ್ಲಿ ಶಿಶುವಾಗಿರುವಾಗ ಈ ಗುರುತು ನಿರ್ಧರಿಸಲ್ಪಟ್ಟ ಮೇಲೆ ಅದು ಆಕಾರದಲ್ಲಿ ಬೆಳೆಯಬಹುದೇ ಹೊರತು, ರೂಪದಲ್ಲಿ ಬದಲಾಗುವುದಿಲ್ಲ. ಬಹು ಯಶಸ್ವಿ ಶಸ್ತ್ರಕ್ರಿಯೆ ಅಥವಾ ಉಗ್ರವಾದ ಚರ್ಮರೋಗ ಉಂಟಾದಾಗ ಮಾತ್ರ ಅದರ ರೂಪ ಕೆಡಬಹುದು, ಇಲ್ಲವೆ ಬದಲಾಗಬಹುದು.

ಇನ್ನೊಂದು ತತ್ವವೆಂದರೆ, ಕೈಬೆರಳಚ್ಚುಗಳನ್ನು ಗೆರೆಗಳ ಸಾಮಾನ್ಯ ಏರಿಳಿತ ಮತ್ತು ಉಬ್ಬುತಗ್ಗುಗಳ ಆಧಾರದ ಮೇಲಿಂದ ಸುವ್ಯವಸ್ಥಿತವಾಗಿ ವರ್ಗೀಕರಿಸಬಹುದು. ಎಲ್ಲ ಕೈಬೆರಳಚ್ಚುಗಳನ್ನು ನಾಲ್ಕು ವರ್ಗಗಳಲ್ಲಿ ವಿಭಜಿಸುತ್ತಾರೆ. ಸುರುಳಿ, ಶಂಖ, ಕಮಾನು ಮತ್ತು ಮಿಶ್ರಿತ ಎಂಬ ವರ್ಗಗಳನ್ನು ಗುರುತಿಸುತ್ತಾರೆ.

ಯಾವುದೇ ಒಂದು ಅಪರಾಧ ನಡೆದ ಸ್ಥಳದಲ್ಲಿ ದೊರೆಯುವ ಕೈಬೆರಳಚ್ಚುಗಳು ಸಾಮಾನ್ಯವಾಗಿ ಮೂರು ಸ್ಥಿತಿಗಳಲ್ಲಿ ಕಂಡುಬರುತ್ತವೆ. ಕೆಲವು ಕಣ್ಣಿಗೆ ಕಾಣುವಂತೆ ಇರುತ್ತವೆ; ಕೆಲವು ಮಣ್ಣಿನಲ್ಲಿ ಮೂಡಿರುತ್ತವೆ; ಕೆಲವು ಕಣ್ಣಿಗೆ ಕಾಣಿಸುವುದಿಲ್ಲ. ಬೇರೆ ಬೇರೆ ವಿಧಾನಗಳನ್ನು ಅನುಸರಿಸಿ ಅವುಗಳನ್ನು ಕಣ್ಣಿಗೆ ಸ್ಪಷ್ಟವಾಗಿ ಕಾಣುವಂತೆ ಮಾಡಬಹುದು.

ಪೇಪರು, ಗಾಜು, ಅಥವಾ ನಯವಾದ ಮೇಲುಮೈ ಇರುವ ವಸ್ತುಗಳ ಮೇಲಿನ ಕೈಬೆರಳಚ್ಚುಗಳನ್ನು ಒಂದು ಪುಡಿಯ (ಪೌಡರ್) ಸಹಾಯದಿಂದ ಎದ್ದುಕಾಣುವಂತೆ ಮಾಡುತ್ತಾರೆ. ಗೋಡೆಯ ಮೇಲೆ ಮೂಡಿದ ಕೈಬೆರಳಚ್ಚುಗಳನ್ನು ಐಯೊಡಿನ್ ಹೊಗೆಯಿಂದ ಗುರುತಿಸುತ್ತಾರೆ. ಒಂದುಸಲ ಈ ರೀತಿ ಕಣ್ಣಿಗೆ ಕಾಣುವಂತೆ ಮಾಡಿದ ನಂತರ ಅವುಗಳನ್ನು ತುಲನಾತ್ಮಕವಾಗಿ ಪರೀಕ್ಷಿಸಲು ಹಾಗೂ ನ್ಯಾಯಾಲಯದಲ್ಲಿ ತೋರಿಸಲು ಬರುವಂತೆ ಕಾಯ್ದಿರಿಸಿಕೊಳ್ಳುತ್ತಾರೆ.

ಅಪರಾಧ ನಡೆದ ಸ್ಥಳದಲ್ಲಿ ದೊರೆತ ಕೈಬೆರಳಚ್ಚುಗಳು ಇಂತಹ ವ್ಯಕ್ತಿಯದೇ ಎಂದು ಖಚಿತವಾಗಿ ಹೇಳಲು ಸಾಧ್ಯವಿದೆ. ಹೀಗಾಗಿ ಆ ವ್ಯಕ್ತಿ ಆ ಸ್ಥಳದಲ್ಲಿ ಇದ್ದನೆಂಬುದು

ಸಾಧ್ಯವಾಗುತ್ತದೆ. ಆದರೆ ಬೆರಳಚ್ಚು ಇದ್ದಾಕ್ಷಣ ಅವನು ಅಪರಾಧ ಮಾಡಿದ್ದಾನೆ ಎಂದು ಹೇಳಲು ಬರುವುದಿಲ್ಲ. ಅಥನು ಅಲ್ಲಿಗೆ ಏಕೆ ಬಂದಿದ್ದಾನೆ ಎಂದು ತಿಳಿಯಬೇಕಾಗುತ್ತದೆ. ಒಂದು ವೇಳೆ ಅಪರಾಧಿಯ ಕೈಬೆರಳಚ್ಚುಗಳು ಅಪರಾಧ ಮಾಡಲು ಬಳಸಿದ ಪಿಸ್ತೂಲು, ಚೂರಿ ಅಥವಾ ಸಲಾಕೆಯ ಮೇಲಿದ್ದರೆ ಅವನು ಆ ಆಯುಧವನ್ನು ಮುಟ್ಟಿದನು ಎಂದು ಹೇಳಬಹುದು. ಹೀಗೆ ಕೈಬೆರಳಚ್ಚಿನ ಮೇಲಿಂದ ಅಪರಾಧಿಗೂ ಅಪರಾಧಕ್ಕೂ ಸಂಬಂಧ ಕಲ್ಪಿಸುವುದು ಸಾಧ್ಯವಾಗುತ್ತದೆ.

(i) ಕೈಬೆರಳಚ್ಚಿನ ಮೂರು ಮೂಲತತ್ವಗಳು ಯಾವುವು? [2]

(ii) ಕೈಬೆರಳಚ್ಚುಗಳು ವ್ಯಕ್ತಿಯ ಏಕಮೇವ ಹಾಗೂ ವೈಶಿಷ್ಯಪೂರ್ಣವಾದ ಪರಿಚಯ ಪತ್ರಗಳೆಂದು ಕರೆಯಲು ಕಾರಣವೇನು? [2]

(iii) ಕೈಬೆರಳಚ್ಚುಗಳು ಯಾವ ಸಂದರ್ಭಗಳಲ್ಲಿ ಬದಲಾಗಬಹುದು? [2]

(iv) ಕೈಬೆರಳಚ್ಚುಗಳ ವಿವಿಧ ವರ್ಗಗಳು ಯಾವುವು? [2]

(v) ಅವು ಸ್ಪಷ್ಟವಾಗಿ ಕಾಣುವಂತೆ ಯಾವ ವಿಧಾನಗಳನ್ನು ಬಳಸುತ್ತಾರೆ? [2]

**Question 4**

Four choices are given for each of the following questions / incomplete statements. Choose the correct answer: [8]

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು(4) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಆಯ್ಕೆಯನ್ನು ಗುರುತಿಸಿ ಬರೆಯಿರಿ.

(i) ಆಮಂತ್ರಣ – ಪದದ ಸಮಾನಾರ್ಥಕ ಪದ.

(a) ನಿಯಂತ್ರಣ

(b) ಆಗಮನ

(c) ಆಹ್ವಾನ

(d) ಕಡಿವಾಣ

(ii) ಅಂತ್ಯ – ಈ ಪದದ ವಿರುದ್ಧಪದ.

(a) ಹಾದಿ

(b) ಕೊನೆ

(c) ಅಂತರ

(d) ಆದಿ

(iii) ಸರಿಯಾದ ವಾಕ್ಯವನ್ನು ಗುರುತಿಸಿ.

(a) ಶಿಕ್ಷಕರ ಬುದ್ಧಿವಾದದಿಂದ ಮಕ್ಕಳಿಗೆ ತಪ್ಪಿನ ಅರಿವಾಯಿತು

(b) ಅರಿವಾಯಿತು ತಪ್ಪಿನ ಶಿಕ್ಷಕರ ಮಕ್ಕಳಿಗೆ ಬುದ್ಧಿವಾದದಿಂದ

(c) ಶಿಕ್ಷಕರು ಮಕ್ಕಳಿಗೆ ತಪ್ಪಿನ ಬುದ್ಧಿವಾದದಿಂದ ಅರಿವಾಯಿತು

(d) ಬುದ್ಧಿವಾದದಿಂದ ಮಕ್ಕಳಿಗೆ ಶಿಕ್ಷಕರ ಅರಿವಾಯಿತು ತಪ್ಪಿನ

(iv) ಗುಣವಂತ – ಈ ಪದದ ಅನ್ಯಲಿಂಗ ರೂಪ.

(a) ಗುಣಮಂತೆ

(b) ಗುಣವಂತೆ

(c) ಗುಣವಂತಿನಿ

(d) ಗುಣವಂತನು

(v) ಚಿಕ್ಕಪ್ಪ – ಈ ಪದದ ಬಹುವಚನ ರೂಪ.

(a) ಚಿಕ್ಕವರು

(b) ಚಿಕ್ಕಮ್ಮಂದಿರು

(c) ಚಿಕ್ಕಪ್ಪರು

(d) ಚಿಕ್ಕಪ್ಪಂದಿರು

(vi) ಮಕ್ಕಳು ನಾಡಗೀತೆಯನ್ನು ಸೊಗಸಾಗಿ <u>ಹಾಡುವರು</u> – ಗೆರೆ ಎಳೆದ ಪದದಲ್ಲಿರುವ ಕಾಲವನ್ನು ಗುರುತಿಸಿ ಬರೆಯಿರಿ.

(a) ಅಪೂರ್ಣ ವರ್ತಮಾನ ಕಾಲ

(b) ಭೂತಕಾಲ

(c) ಭವಿಷ್ಯತ್ ಕಾಲ

(d) ವರ್ತಮಾನ ಕಾಲ

(vii) ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಆರಿಸಿ ವಾಕ್ಯವನ್ನು ಪೂರ್ಣಗೊಳಿಸಿ.

ವಿದ್ಯಾರ್ಥಿಗಳು ಮೈದಾನ ______ ಹೋಗಲು ಗುರುಗಳ ಅನುಮತಿ ______ ಪಡೆದರು.

(a) ದಿಂದ, ಗೆ

(b) ಕ್ಕೆ, ಯನ್ನು

(c) ವನ್ನು, ಇಂದ

(d) ನಿಂದ, ಕ್ಕೆ

(viii) -------- ಇಲ್ಲದವನಿಗೆ ಸಂತೆಯಲ್ಲಿಯೂ ನಿದ್ದೆ – ಈ ಗಾದೆ ಮಾತನ್ನು ಪೂರ್ಣಗೊಳಿಸಿ.

(a) ನಿರಾಸೆ

(b) ದುಃಖ

(c) ಚಿಂತೆ

(d) ಸಂತೋಷ

## SECTION B

*(Attempt **four** questions from this **Section**.)*

*(You must answer at least **one** question from each of the **two** books you have studied and any **two** other questions.)*

## ಸಾಹಿತ್ಯ ಸಂಗಮ – ಸಣ್ಣ ಕಥೆಗಳು

## SAHITYA SANGAMA – SHORT STORIES

### Question 5

Read the extract given below and answer in **Kannada,** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

> "ಅಮೂಲ್ಯವಾದ ವಜ್ರದ ಹಾರ ಮತ್ತೆ ಸಿಗುವುದಾದರೆ ನೀವು ಏನು ಕೇಳಿದರೂ ಕೊಡುತ್ತೇನೆ." ರಾಜ ಉಲ್ಲಾಸದಿಂದ ಹೇಳಿದ, ಪ್ರತಾಪ ಗುಡಿಸಲಿಗೆ ಹಿಂದಿರುಗಿ ವಿಷಯವನ್ನು ತಿಳಿಸಿದನು.
>
> *ದೀಪಾವಳಿಯ ಮಹಿಮೆ – ಜನಪದ*
>
> *Deepavali Mahime - Janapada*

(i) ಪ್ರತಾಪ ಯಾರು? ಲಕ್ಷ್ಮೀದೇವಿ ಅವನ ಸೊಕ್ಕನ್ನು ಇಳಿಸಲು ನಿರ್ಧರಿಸಲು ಕಾರಣವೇನು? [2]

(ii) ಪ್ರತಾಪ ಮತ್ತು ಅವನ ಮಗ ಕೆಲಸಕ್ಕೆ ಹೋಗುವ ಸ್ಥಿತಿ ಉಂಟಾದದ್ದು ಏಕೆ? [2]

(iii) "ನನ್ನನ್ನು ತಡೆಯಬೇಡ. ಈ ರಾತ್ರಿ ತಂಗಲು ಅವಕಾಶ ಮಾಡಿಕೊಡು." – ಈ ಮಾತನ್ನು ಯಾರು ಯಾರಿಗೆ ಹೇಳಿದರು? ಸಂದರ್ಭವನ್ನು ವಿವರಿಸಿ. [3]

(iv) ಪ್ರತಾಪನು ಕಳೆದುಕೊಂಡ ರಾಜ್ಯವನ್ನು ಪಡೆದದ್ದು ಹೇಗೆ? [3]

## Question 6

Read the extract given below and answer in **Kannada,** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

"ಸ್ವಾಮಿ, ನಮಗೆ ಅಂತ್ಯಕಾಲವು ಬಂದಿದೆ" ಎನ್ನುತ್ತ ನಡುಗುತ್ತಿದ್ದ ಹೆಣ್ಣನ್ನು ಜೊತೆಗಾರ ಪಾರಿವಾಳವು ಸಂತೈಸುತ್ತ, ಅದೇನೆಂದು ಹೇಳಬಾರದೇ?" ಎಂದಿತು.

*ತಾಳ್ಮೆಗೆ ಒಲಿದ ಅದೃಷ್ಟ – ಎನ್. ದಾಮೋದರ್*

*Thalmege Olida Adrushta – N. Damodhara*

(i) ನಾರಾಯಣಿ ದಾಮೋದರ್ ಅವರ ಕಾಲ, ಸ್ಥಳ, ಕೃತಿಗಳೊಂದಿಗೆ ಪರಿಚಯಿಸಿ. [2]

(ii) ಪಾರಿವಾಳಗಳು ಹೇಗೆ ಜೀವನ ನಡೆಸುತ್ತಿದ್ದವು? [2]

(iii) ಪಾರಿವಾಳಗಳಿಗೆ ಒದಗಿದ ಕಷ್ಟವನ್ನು ವಿವರಿಸಿ. [3]

(iv) ಬೇಡನು ಬಾಣ ಬಿಟ್ಟಾಗ ನಡೆದ ಘಟನೆಯನ್ನು ವಿವರಿಸಿ. [3]

## Question 7

Read the extract given below and answer in **Kannada,** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:–

ಎಲ್ಲರೂ ನಗಲಾರಂಭಿಸಿದರು. ನಮ್ಮಿಬ್ಬರಿಗೂ ಅವಮಾನವಾದಂತಾಗಿ ಅಳು ಬಂದಿತು. ಆದರೆ ಸಹಿಸಲಾರದ ನಗು ಅಳುವನ್ನು ಮೀರಿ ಹೊರ ಹೊರಟಿತು.

*ಕಥೆಗಾರ ಮಂಜಣ್ಣ – ಕುವೆಂಪು*

*Kathegaara Manjanna - Kuvempu*

(i) ಮಂಜಣ್ಣ ಯಾರು? ಅವನು ನೋಡಲು ಹೇಗಿದ್ದ? ವಿವರಿಸಿ. [2]

(ii) ಹುಡುಗರಿಗೆ ಮಂಜಣ್ಣನನ್ನು ಕಂಡರೆ ಯಾವ ಭಾವವಿತ್ತು? ತಿಳಿಸಿ. [2]

(iii) ಮಂಜಣ್ಣ ಮಕ್ಕಳಿಗೆ ಕಥೆ ಹೇಳುವಾಗ ಬಂದ ಅಡೆತಡೆಗಳೇನು? [3]

(iv) "ಸ್ವಲ್ಪ ಜಾಗಬಿಡಿ, ಕಥೆ ಹೇಳಿ ತೋರಿಸುವುದಕ್ಕೆ ಆಗುವುದಿಲ್ಲ." – ಸಂದರ್ಭದೊಡನೆ ವಿವರಿಸಿ. [3]

## ಸಾಹಿತ್ಯ ಸಂಗಮ – ಕವನಗಳು

## SAHITYA SANGAMA – POEMS

**Question 8**

Read the extract given below and answer in **Kannada** the questions that follow

ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯ ಕೂಡಲ ಸಂಗಮದೇವ

*ವಚನಗಳು – ಬಸವಣ್ಣ ಮತ್ತು ಅಕ್ಕಮಹಾದೇವಿ*
*Vachanagalu – Basvanna & Akkamahadevi*

(i) ಶ್ರೀಮಂತಿಕೆ ಎಂಬ ಗರ್ವಕ್ಕೆ ಯಾವ ಚಿಕಿತ್ಸೆಯನ್ನು ನೀಡಬೇಕೆಂದು ಬಸವಣ್ಣನವರು ತಿಳಿಸಿದ್ದಾರೆ? [2]

(ii) ಅಂತರಂಗ–ಬಹಿರಂಗ ಶುದ್ಧಿಯಾಗಲು ಏನೇನು ಮಾಡಬಾರದೆಂದು ಬಸವಣ್ಣ ಹೇಳಿದ್ದಾರೆ? [2]

(iii) ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮದೇವ – ಸಂದರ್ಭವನ್ನು ವಿವರಿಸಿ. [3]

(iv) ಬಸವಣ್ಣನವರನ್ನು ಪರಿಚಯಿಸಿ. [3]

**Question 9**

Read the extract given below and answer in **Kannada** the questions that follow

ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

ಶೋಕವನು ಗೈಯುವರು ಸತಿಸುತರು ಬಾಂಧವರು
ಜೋಕೆ ತಪ್ಪಿದ ಬಳಿಕ ಅರ್ಥ – ವ್ಯರ್ಥ
ಲೋಕದಲಿ ಸ್ಥಿರವಾದ ಕೀರ್ತಿ – ಅಪಕೀರ್ತಿಗಳು
ಸಾಕಾರವಾಗಿ ಸಂಗಡ ಬಾಹುವಲ್ಲದೆ

*ಆರು ಹಿತವರು ನಿನಗೆ – ಪುರಂದರದಾಸರು*
*Aaru Hitavaru Ninage – Purandara Dasaru*

(i) ಪುರಂದರದಾಸರ ಕಾಲ, ಪೂರ್ವದ ಹೆಸರು, ಗುರು, ಅಂಕಿತಗಳೊಂದಿಗೆ ವಿವರಿಸಿ. [2]

(ii) ಪುರಂದರದಾಸರು ಹೆಣ್ಣಿನ ಬಗ್ಗೆ ಏನೆಂದು ಹೇಳಿದ್ದಾರೆ? [2]

(iii) ರಾಜನ ದೇಹದ ನಶ್ವರತೆಯನ್ನು ದಾಸರು ಹೇಗೆ ವಿವರಿಸಿದ್ದಾರೆ? [3]

(iv) ಜೀವನದಲ್ಲಿ ಸತ್ಕಾರ್ಯದ ಮಹತ್ವವನ್ನು ಹೇಗೆ ಸಂಪಾದಿಸಬಹುದು? ವಿವರಿಸಿ. [3]

**Question 10**

Read the extract given below and answer in **Kannada** the questions that follow

ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿಬೀದಿಯನಲೆದು ನೋಡಬೇಕು
ಅಲ್ಲಿ ಎಲ್ಲಾದರೂ ಮರದ ನೆರಳಿಗೆ ಕುಳಿತು
ರಾಮಭದ್ರನ ಮಹಿಮೆ ಹಾಡಬೇಕು.

*ಮಿಥಿಲೆ – ಸು.ರಂ.ಎಕ್ಕುಂಡಿ*
*Mithile – S.R.Yekkundi*

(i) ಅಲ್ಲಿ ಎಲ್ಲಾದರೂ ಮರದ ನೆರಳಿಗೆ ಕುಳಿತು ರಾಮಭದ್ರನ ಮಹಿಮೆ ಹಾಡಬೇಕು" – ಸಂದರ್ಭವನ್ನು ವಿವರಿಸಿ. [3]

(ii) ಬಿಲ್ಲನ್ನು ಎತ್ತಿ ಮುರಿದ ಮೇಲೆ ನಡೆದ ಸಂಭ್ರಮವನ್ನು ವಿವರಿಸಿ. [3]

(iii) ರಾಮಭದ್ರನನ್ನು ಬಿಲ್ಲನ್ನೆತ್ತುವ ದಿನ ಹೇಗೆ ಬರಮಾಡಿಕೊಂಡರು? ವಿವರಿಸಿ. [2]

(iv) ಸೀತೆಯ ಬೀಳ್ಕೊಡುಗೆಯ ದೃಶ್ಯವನ್ನು ಕವಿ ಹೇಗೆ ವರ್ಣಿಸಿದ್ದಾರೆ? [2]

## ಕಾದಂಬರಿ – ನಾಟ್ಯ ಮಯೂರಿ
## (NOVEL – NATYA MAYURI)
## ಶ್ರೀ.ಸಾ. ಶಿ. ಮರುಳಯ್ಯ
## (SHRI. SA. SHI. MARULAYYA)

**Question 11**

Read the extract given below and answer in **Kannada** the questions that follow:
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

"ಇರಲಿ ಚಿಂತೆಯಿಲ್ಲ, ಶಾಂತಲೆಯನ್ನು ವಿಷ್ಣು ಮನಸಾ ಪ್ರೀತಿಸಿ ಲಗ್ನವಾಗಲು ಇಚ್ಛಿಸಿದರೆ ಉಳಿದವರು ರಾಜಕಾರಣಕ್ಕಾಗಿ ಬಾಂಧವ್ಯವನ್ನು ಬಯಸುತ್ತಿದ್ದಾರೆ.

(i) ಡಣಾಯಕ ಮಾರಸಿಂಗಮಯ್ಯನವರ ಹುಟ್ಟೂರು ಯಾವುದು? ಆ ಊರಿನ ಹಿರಿಮೆಯ ಕುರಿತು ಹೇಗೆ ವರ್ಣಿಸಲಾಗಿದೆ? [3]

(ii) ಲಕ್ಷ್ಮಿ ಯಾರು? ಬಪ್ಪರಸನು ಅವಳ ಬಗ್ಗೆ ವಿಷ್ಣುವರ್ಧನನಿಗೆ ನೀಡಿದ ಮಾಹಿತಿ ಏನು? [3]

(iii) "ಮಾನವನಿಗೆ ಸಾಧ್ಯವಾದುದು ಈ ಜಗತ್ತಿನಲ್ಲಿ ಯಾವುದೂ ಇಲ್ಲ" ಎಂದು ಹೇಳುತ್ತ ಬಪ್ಪರಸನು ವಿಷ್ಣುವರ್ಧನನಿಗೆ ಕೊಟ್ಟ ಉದಾಹರಣೆಗಳು ಯಾವುವು? [2]

(iv) "ಕಿನ್ನರ ಕನ್ಯೆಯರು ಅವಳ ವಾದನ ಚಾತುರ್ಯಕ್ಕೆ ಬೆರಗಾಗಬೇಕು" – ಎಂದು ಯಾರು ಯಾರನ್ನು ಉದ್ದೇಶಿಸಿ ಹೇಳಿದರು? [2]

**Question 12**

Read the extract given below and answer in **Kannada** the questions that follow:
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

> "ರಾಜಾ....... ನಿನ್ನ ತಾಯಿ, ಮಹಾಮಾತೆಯಾಗಿದ್ದರೆ ಅದು ನೇರವಾಗಿ ಅನ್ವಯಿಸುವುದು ಅರಮನೆಗೆ, ಗುರುಮನೆಗಲ್ಲ."

(i) ಮೇಲಿನ ವಾಕ್ಯದ ಸಂದರ್ಭವನ್ನು ವಿವರಿಸಿ. [2]

(ii) ಶಿಲ್ಪ ಕಲಾಚಾರ್ಯ ಜಕ್ಕಣ್ಣನ ಪುಣ್ಯಾಶ್ರಮವಿದ್ದುದು ಎಲ್ಲಿ? ಆ ಆಶ್ರಮದ ಕುರಿತು ಬರೆಯಿರಿ. [2]

(iii) ವಿಷ್ಣುವರ್ಧನ ಮತ್ತು ಶಾಂತಲಾದೇವಿಯವರ ದೃಷ್ಟಿಯಲ್ಲಿ ಅಧಿಕಾರ ಎಂದರೇನು? ತಿಳಿಸಿ. [3]

(iv) ಜಕ್ಕಣ್ಣಾಚಾರಿಯ ಇಬ್ಬರು ಶಿಷ್ಯಂದಿರ ಹೆಸರೇನು? ಅವರು ಬಾಣಭಟ್ಟನ ಕಾದಂಬರಿಯನ್ನು ಕಂಡರಿಸುತ್ತಿರುವ ಜಕ್ಕಣ್ಣಾಚಾರಿಯವರಿಗೆ ಹೇಗೆ ಸಹಾಯ ಮಾಡುತ್ತಿದ್ದರು? [3]

**Question 13**

Read the extract given below and answer in **Kannada** the questions that follow:
ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

> ದೇವಲೋಕದ ನರ್ತಕಿ ನೀಲಾಂಜನೆ ಪುರುದೇವನಿದ್ದ ಆಸ್ಥಾನದಲ್ಲಿ ನರ್ತನ ಮಾಡುತ್ತಿದ್ದ ವೇಳೆಯಲ್ಲೇ, ತನ್ನ ಆಯುಸ್ಸು ಮುಗಿಯಲು ನರ್ತನದ ವೇದಿಕೆಯ ಮೇಲೆಯೇ ಸತ್ತು ಹೆಣವಾಗಿ ಬೀಳುತ್ತಾಳೆ.

(i) ಕವಿ ನಾಗಚಂದ್ರನ ಯಾವ ಮಾತುಗಳು ಶಾಂತಲೆಯ ಮನದಲ್ಲಿ ಭದ್ರವಾಗಿ ಬೇರೂರಿದವು? ಅವಳು ತನ್ನ ಮನಸ್ಸಿನಲ್ಲಿ ಅಂದುಕೊಂಡದ್ದೇನು? [2]

(ii) ಶಾಂತಲೆಯು ತವರಿಗೆ ಮರಳಿದಾಗ ಅವಳಿಗೆ ಉಂಟಾದ ಭಾವನೆ ಏನು? [2]

(iii) ಶಾಂತಲೆಯ ಜೀವನದಲ್ಲಿ ನಡೆದ ದುರ್ಘಟನೆಗಳು ಯಾವುವು? [3]

(iv) ಶಾಂತಲೆಯು ಪಟ್ಟದ ಅರಸಿಯ ಸ್ಥಾನದಿಂದ ಕೆಳಗಿಳಿಯಲು ನಿರ್ಧರಿಸಿದ್ದು ಏಕೆ? [3]

## ನಾಟಕ – ಹೂವಿ
## [ಹೆಚ್. ಎಸ್. ವೆಂಕಟೇಶ ಮೂರ್ತಿ]

## DRAMA - HOOVI
## [H. S. Venkatesh Murthy]

**Question 14**

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

ಹುವ್ವ ಜೋಕಾಲೆ ಗಿಳಿಯ ಪಡಸಾಲೆ!

ಬಿಳಲು ಗಡ್ಡದ ಜೋಗಿ ಶರಣು!!

ತಂಗಾಳಿ ಕೊಳಲೇ! ಬಿದಿರಿನ ಕಳಿಲೇ!

(i) ರೈತರು ಬಂಡಿ ಕಟ್ಟಿಕೊಂಡು ಎಲ್ಲಿಗೆ ಹೊರಟಿದ್ದರು? ಅವರು ಯಾವ ಯಾವ ಮರಗಳಿಗೆ ಶರಣು ಎನ್ನುತ್ತಿದ್ದರು? [2]

(ii) ಸಾಲು ಗಾಡಿಗಳು ಯಾವ ದಾರಿಯಲ್ಲಿ ಸಾಗುತ್ತವೆ? ಕಾರಣವೇನು? [2]

(iii) ಹೇ, ಹೇ, ಬಸವಾ ಎಂದು ರೈತರು ಯಾವುದಕ್ಕೆ ಹೇಳುತ್ತಾರೆ? ಬನದಮ್ಮನನ್ನು ಶರಣು ಎನ್ನುವ ಬಗೆ ಎಂತಹುದು? [3]

(iv) ರೈತನಿಗೆ ಹೂವಿಯು ಕಾಣಿಸಿಕೊಂಡ ಬಗೆ ಹೇಗೆ? ವಿವರಿಸಿ. [3]

**Question 15**

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

ಜೋಕಾಲೆ ಜೀಕೋಣ! ಬೇಸರ ನೂಕೋಣ!

ಮೋಡವ ತಾಕೋಣ! ಗೆಳತೀ!!

ಭಾರ ಬಿಸಾಕೋಣ! ಚಪ್ಪಾಳೆ ಹಾಕೋಣ

ತಂಗಾಳಿ ಸೋಕೋಣ! ಗೆಳತೀ!!

(i) ಬೆಳ್ಳಿ ಹೂವಿಯನ್ನು ಮಾತನಾಡಿಸುತ್ತ ಕೇಳಿಕೊಂಡಿದ್ದೇನು? ವಿವರಿಸಿ. [2]

(ii) ಬೆಳ್ಳಿ ಮತ್ತು ಗೆಳತಿಯರಿಗಾಗಿ ಹೂವಿಯು ಹೂಮರವಾದ ರೀತಿ ಹೇಗೆ? [2]

(iii) ಬೆಳ್ಳಿಯು ಹೂವಿಗೆ ಮರವಾಗುವುದು ನಿನಗೆ ಸಾಧ್ಯವೆಂದು ತಿಳಿಸಿ, ಹೂವಿಯನ್ನು ಬೇಡಿಕೊಂಡಿದ್ದು ಹೇಗೆ? [3]

(iv) ಹೂವಿಯ ಕಣ್ಣಿಂದ ನೀರು ಸುರಿದದ್ದು ಯಾವಾಗ? ವಿವರಿಸಿ. [3]

**Question 16**

Read the extract given below and answer in **Kannada** the questions that follow:

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:

> ಬಿಡ್ತು ಅನ್ನು..... ಈ ವಯಸ್ನಲ್ಲಿ ಸನ್ಯಾಸ ಗಿನ್ಯಾಸ ಅಂತ ಮಾಡಬಾರ್ದು.... ಬೆನ್ನು ಇರೋ ತನಕ ಹೊರೆ ತಪ್ಪಿದ್ದಲ್ಲ ಅಂತ ಕೇಳಿಲ್ವಾ?

(i) (ನಕ್ಕು) "ಯಾಕೆ? ತುಂಬಾ ಸುಸ್ತಾಯಿತೇನು ನಿನಗೆ?" ಈ ಮಾತಿನ ಸಂದರ್ಭವನ್ನು ತಿಳಿಸಿ. [2]

(ii) ಗೋಡಾ ಹೈ-ಮೈದಾನ್ ಹೈ...! ಎಂದು ನುಡಿದದ್ದು ಯಾರು? ಏಕೆ? [2]

(iii) "ಹೂ-ಹುಲ್ಲು... ಇವುಗಳ ವ್ಯತ್ಯಾಸನೇ ತಿಳಿಯೋಲ್ಲ ನಿನಗೆ!" ಈ ಮಾತನ್ನು ಯಾರು ಯಾರಿಗೆ ಹೇಳಿದರು? ಏಕೆ? ವಿವರಿಸಿ. [3]

(iv) ಆಹಾ....! ಎಷ್ಟು ಒಳ್ಳೆಯವನು ನನ್ನ ಅಣ್ಣ...! ಎಂದು ಬೆಳ್ಳಿ ತನ್ನ ಅಣ್ಣನನ್ನು ಮೆಚ್ಚಿದ್ದು ಏಕೆ? ವಿವರಿಸಿ. [3]